## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ. ನಂ. 1478/2023** **ಪ್ರಾ.ಸಾ –2**
**ಚಾ.ಸಾ – 4**

**ದಿನಾಂಕಃ 25.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ತೀರ್ಥ ಕುಮಾರ್ |
| ತಂದೆಯ ಹೆಸರು | : | ಭೀಮಯ್ಯ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ASI, |
| ವಾಸ ಸ್ಥಳ | : | ಶ್ರೀಮಂಗಲ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2022 ನವೆಂಬರ್ ರಿಂದ 2023 ರ ನವೆಂಬರ್ ತನಕ ಶ್ರೀಮಂಗಲ ಪೊ.ಠಾಣೆಯಲ್ಲಿ ASI ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 18.09.2023 ರಂದು ನಾನು ಠಾಣೆಯಲ್ಲಿದ್ದಾಗ ಸಮಯ 10.15 ಗಂಟೆಗೆ ಬೆಳಿಗ್ಗೆ ಚಾಸಾ 1 ರವರಿಗೆ ಶ್ರೀಮಂಗಲ ಬಸ್ ನಿಲ್ದಾಣದ ಎದುರುಗಡೆಯ ಭುವನೇಶ್ವರಿಯ ಅಂಗಡಿಯ ಮುಂದೆ ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಅವರು ನ್ಯಾಯಾಲಯದಲ್ಲಿ ಪ್ರ.ವ.ವರದಿ ಸಲ್ಲಿಸಿ ನಂತರ ನನ್ನನ್ನು ಚಾಸಾ 5, 6, 7, 8 ರವರನ್ನು ಕರೆದು ದನದ ಮಾಂಸ ಮಾರಾಟ ಮಾಡುವ ಬಗ್ಗೆ ದಾಳಿ ಮಾಡಲು ನಮ್ಮನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಶ್ರೀಮಂಗಲ ಬಸ್ ನಿಲ್ದಾಣದ ಆಟೋ ಸ್ಟಾಂಡ್ ಬಳಿ ಪಂಚರಾದ ಚಾಸಾ 2 ಮತ್ತು 3 ರವರಿಗೆ ಪ್ರಕರಣದ ಮಾಹಿತಿ ತಿಳಿಸಿ ದಾಳಿ ನಡೆಸಲು ಸಹಕರಿಸಲು ಕೋರಿದ್ದು ಅವರು ಒಪ್ಪಿದ್ದು ಅವರಿಗೆ ನೋಟೀಸ್ ಜಾರಿ

ಮಾಡಿರುತ್ತಾರೆ. ನಂತರ ಅಂಗಡಿ ಬಳಿ ಕರೆದುಕೊಂಡು ಹೋಗಿ ನೋಡಿದಾಗ ಅಲ್ಲಿ ಒಬ್ಬ ಪ್ಲಾಸ್ಟಿಕ್ ಚೀಲದಲ್ಲಿ ದನದ ಮಾಂಸವನ್ನು ಇಟ್ಟು ಕೊಂಡಿರುತ್ತಾನೆ ಅವನನ್ನು ವಿಚಾರಿಸಲಾಗಿ ಹೆಸರು ವಿಳಾಸ ಕೇಳಲಾಯಿತು ಅವನು ಹಿಂದಿ ಭಾಷೆಯಲ್ಲಿ ಮಾತನಾಡಿರುತ್ತಾನೆ.

ಅವನ ಹತ್ತಿರ ದನದ ಮಾಂಸದ ಬಗ್ಗೆ ವಿಚಾರಣೆ ಮಾಡಿದಾಗ ಕೇರಳದ ಕಾಟುಕೊಳಂ ನಿಂದ ತಂದಿರುವುದಾಗಿ ತಿಳಿಸಿರುತ್ತಾನೆ. ಚಾಸಾ 1 ರವರು ಆರೋಪಿಯನ್ನು ಹಿಂದಿ ಭಾಷೆಯಲ್ಲಿ ವಿಚಾರಿಸಿರುತ್ತಾರೆ. ಪಂಚರ ಸಮಕ್ಷಮ ನೋಡಿದಾಗ 4 ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ. ಚಾಸಾ 7 ರವರನ್ನು ಠಾಣೆಗೆ ಕಳಿಸಿ ತೂಕ ಯಂತ್ರ ತರೆಸಿ ತೂಕ ಮಾಡಿದಾಗ 4 ಪ್ಯಾಕೆಟ್ ಗಳಲ್ಲಿ ತಲಾ 2 ಕೆ ಜಿ ಒಟ್ಟು 8 ಕೆ ಜಿ ದನದ ಮಾಂಸಇರುವುದು ಕಂಡು ಬಂದಿದ್ದು ಅದನ್ನು ವಶಪಡಿಸಿಕೊಳ್ಳಲಾಯಿತು. ಮಹಜರ್ ಅನ್ನು 10.15 ರಿಂದ 11.15 ರತನಕ ಮಾಡಲಾಯಿತು.

ಸಾಕ್ಷಿಯು ನಿ ಪಿ 1 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾದಿಕಾರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಠಾಣೆಯಲ್ಲಿ ಮಾಹಿತಿ ಬಂದಾಗ ನಾನು ಇದ್ದೆ. ಚಾಸಾ 1 ರವರಿಗೆ ಮಾಹಿತಿ ಬಂದಿರುತ್ತದೆ. ಠಾಣೆಯನ್ನು 10.30 ಗಂಟೆಗೆ ಬಿಟ್ಟು ಹೋಗಿರುತ್ತೇವೆ. ಚಾಸಾ 1, 5, 6, 7 ರವರು ಹಾಜರಿದ್ದರು. ಪ್ರೊ. ಠಾಣೆಯಿಂದ ಕೃತ್ಯ ಸ್ಥಳ 500 ಮೀ ದೂರ. ಆರೋಪಿಯ ವಶದಲ್ಲಿ ಸ್ಥಳಕ್ಕೆ ಹೋದಾಗ ದನದ ಮಾಂಸ ಇತ್ತು. ಕೃತ್ಯ ಸ್ಥಳ ಶ್ರೀಮಂಗಲ ಮುಖ್ಯ ರಸ್ತೆ ಎಂದರೆ ಸರಿ. ಈ ಭುವನೇಶ್ವರಿ ಅಂಗಡಿಗೆ ಗ್ರಾಹಕರು

ಬಂದು ಹೋಗಿರುತ್ತಾರೆ ಎಂದರೆ ಸರಿ. ದನದ ಮಾಂಸವನ್ನು ಖರೀದಿ ಮಾಡುವುದು ನೋಡಲಿಲ್ಲ, ಆದರೆ ಮಾಹಿತಿಯಂತೆ ಪರಿಶೀಲಿಸಿದಾಗ ಆರೋಪಿಯ ಬ್ಯಾಗ್ ನಲ್ಲಿ ದನದ ಮಾಂಸವಿತ್ತು. ನಮಗೆ 8 ಕೆ ಜಿ ದನದ ಮಾಂಸ ಸಿಕ್ಕಿದ್ದು ಉಳಿದ ಮಾಂಸದ ಬಗ್ಗೆ ಗೊತ್ತಿಲ್ಲ. ದನದ ಮಾಂಸ ಎಂದರೆ ಮಾಂಸದ ತೂಕ ಜಾಸ್ತಿಯಾಗಿದ್ದು ಕೇವಲ 8 ಕೆ ಜಿ ಯಷ್ಟು ದನದ ಮಾಂಸ ತೂಕ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಶದಲ್ಲಿ ದನದ ಮಾಂಸ ಇರಲಿಲ್ಲ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 2 ಈ ಪ್ರಕರಣದ ಫೋಟೋ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ